**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ ನಂ. 6439/2022** ಸಿ.ಡಬ್ಲ್ಯೂ -15

ಪಿ.ಡಬ್ಲ್ಯೂ -4

ಹೆಸರು : ವಾತ್ಸಲ್ಯ

ತಂದೆ:ಗಂಡ : ಸಂಗಣ್ಣ

ವಯಸ್ಸು : 34 ವರ್ಷ

ಉದ್ಯೋಗ : ಪಿಎಸಐ, ನಿಂಬರ್ಗಾ,

ವಾಸಸ್ಥಳ : ನಿಂಬರ್ಗಾ

ದಿನಾಂಕ:17.01.2024

ಸತ್ಯ ಪ್ರತಿಜ್ಞೆಯ ಮೇರೆಗೆ.

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ:**

ದಿ.23.09.2021 ರಿಂದ 30.07.2023 ರ ವರೆಗೆ ನಾನು ನರೋಣಾ ಪೋಲಿಸ ಠಾಣೆಯಲ್ಲಿ ಪಿಎಸಐ ಎಂದು ಕಾರ್ಯನಿರ್ವಹಿಸಿಸಿದ್ದೇನೆ.

ದಿ.14.06.2022 ರಂದು ಮಾನ್ಯ ಜಿಲ್ಲಾಧಿಕಾರಿಗಳು ಭೌತಿಕ ಪರಿಕ್ಷೆ ಕುರಿತು ಗುನ್ನೆ ಸಂಖ್ಯೆಉ 7/2020 ರಲ್ಲಿ ಹಾಜರಾಗುವಂತೆ ಸೂಚಿಸಿದ್ದು ಅದರಂತೆ ಹಾಜರಾಗಿ ಎಫಎಸಎಲ್ ಗಾಗಿ ಮಾನ್ಯ ಜಿಲ್ಲಾಧಿಕಾರಿಗಳ ಮುಂದೆ ಮು.ಮಾ. ಹಾಜರುಪಡಿಸಿದ್ದು ವರದಿಯನ್ನು ದಿ.25.06.2022 ಪಡೆದಿರುತ್ತೇನೆ. ಅದೇ ದಿನ ದೊ.ಪ. ಸಂಖ್ಯೆ 55/2022 ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಿ.14.06.2022 ರಂದು ಭಾವಚಿತ್ರ ತೆಗೆದ ಬಗ್ಗೆ ಚಾಸಾ-13 ರವರಿಂದ ಕಲಂ 65 (ಬಿ) ಸಾಕ್ಷಾಧಿನಿಯಮದಂತೆ ಧೃಡಿಕರಣ ಪತ್ರ ಪಡೆದಿರುತ್ತೇನೆ.

ಸಾಕ್ಷಿಗೆ ಈಗ ಮೂರು ಭಾವಚಿತ್ರವನ್ನು ತೋರಿಸಿ ಅವುಗಳನ್ನು ಗುರುತಿಸಿದ್ದು ಮೂರು ಭಾವಚಿತ್ರಗಳನ್ನು ನಿಪಿ-3 ರಿಂದ ನಿಪಿ-5 ಎಂದು 65(ಬಿ) ಧೃಡಿಕರಣ ಪತ್ರವನ್ನು ನಿಪಿ-6 ಎಂದು ಗುರುತಿಸಲಾಯಿತು. ನಿಪಿ-6 ರಲ್ಲಿನ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ದಿ.14.06.2022 ರ ಜಿಲ್ಲಾಧಿಕಾರಿಗಳ ನಡಾವಳಿಗಳನ್ನು ತೋರಿಸಿ ಅದರಲ್ಲಿನ ಸಹಿ ಗುರುತಿಸಿದ್ದು ನಡಾವಳಿಗಳನ್ನು ನಿಪಿ-7, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮು.ಮಾ.ಗಳನ್ನು ನೋಡಿ ಗುರುತಿಸುತ್ತಾರೆ.

**ಪಾ. ಸವಾಲು:- ಆರೋಪಿತರ ಪರ ಶ್ರೀ ಎಸ.ಎ.ಕೆ. ವಕೀಲರಿಂದ:**

ಆರೋಪಿ ಒಳ್ಳೆಯ ಕುಟುಂಬಕ್ಕೆ ಸೇರಿದ್ದು ಅವನ ವಿರುದ್ಧ ಈ ಪ್ರಕರಣಕ್ಕೂ ಮುಂಚೆ ಯಾವುದೇ ಪ್ರಕರಣಗಳು ಇರುವುದಿಲ್ಲ ಅದ ಕಾರಣ ನಾನು ಆರೋಪಿಯ ಬಗ್ಗೆ ವೈಯಕ್ತಿಕ ವಿಚಾರಣೆ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಆರೋಪಿಯ ಬಗ್ಗೆ ವೈಯಕ್ತಿಕ ವಿಚಾರಣೆ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ನಾನು ಸ್ವಿಕರಿಸಿದ ಕಡತವನ್ನು ಪರಿಶೀಲನೆ ಮಾಡಿರುತ್ತೇನೆ. ಮ್ಯಾಗಜೀನಗೆ ಇಂತಿಷ್ಟು ಗುಂಡುಗಳು ಹಾಕುವಂತೆ ಸಾಮರ್ಥ್ಯ ಇರುತ್ತದೆ ಎಂದರೆ ಸರಿ. ನಾನು ದೋ.ಪ.ಯಲ್ಲಿ ಮ್ಯಾಗಜೀನಗಳು ಖಾಲಿ ಇದ್ದವೋ ಅಥವಾ ಗುಂಡುಗಳಿಂದ ತುಂಬಿದ್ದವೋ ಎಂದು ದೊ.ಪ. ಯಲ್ಲಿ ಉಲ್ಲೇಖ ಇರುವುದಿಲ್ಲ ಎಂದರೆ ಸರಿ. ನಾನು ತನಿಖಾಧಿಕಾರಿ ಆಗಿದ್ದು ನಾನು ಪಿಸ್ತೂಲಿನ ಬಗ್ಗೆ ಆಗಲೀ ಮ್ಯಾಗಜೀನ ಬಗ್ಗೆ ಆಗಲಿ ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-6 ಕಲಂ 65(ಬಿ) ಸಾಕ್ಷಾಧಿನಿಯಮ

ಅನೂಸಾರವಾಗಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ಭಾವಚಿತ್ರ ತೆಗೆದ ಕ್ಯಾಮರಾ ಮಾಹಿತಿ ಹಾಗೂ ಪ್ರಿಂಟ ತೆಗೆದ ಮಾಧ್ಯಮದ ಮಾಹಿತಿ ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ-6 ನ್ನು ಪ್ರಕರಣಕ್ಕೆ ಅನುಕೂಲವಾಗಲೀ ಎಂದು ನಾವೇ ತಯಾರಿಸಿ ಕಡತದಲ್ಲಿ ಅಳವಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಆರೋಪಿಯ ಬಳಿ ಪಿಸ್ತೂಲ ಯಾರ ಬಳಿಯಿಂದ ಬಂದಿರುತ್ತದೆ ಎಂದು ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾನು ವಿಚಾರಣೆ ಮಾಡಿದಾಗ ಆರೋಪಿ ಒಬ್ಬ ಅಪರಿಚಿತನಿಂದ ಪಿಸ್ತೂಲ ಪಡೆದುಕೊಂಡಿರುತ್ತೇನೆ ಎಂದು ತಿಳಿಸಿರುತ್ತಾನೆ ಎಂದು ಹೇಳುತ್ತಾರೆ. ಈ ಪ್ರಕರಣದ ದೂರುದಾರರು ನಮ್ಮ ಮೇಲಾಧಿಕಾರಿ ಎಂದರೆ ಸರಿ. ಚಾಸಾ-1 ರವರು ಒಂದು ಸುಳ್ಳು ಪ್ರಕರಣ ದಾಖಲಿಸಿದ ಕಾರಣ ನಾನು ಅವರ ಮಾತು ಕೇಳಿ ಯಾವುದೇ ತನಿಖೆ ಕೈಗೊಳ್ಳದೇ ಒಂದು ಸುಳ್ಳು ದೋ.ಪ. ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಒಂದು ಸುಳ್ಳು ದೋ.ಪ. ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.